# ಕರ್ನಾಟಕ ಲೋಕಾಯುಕ್ತ

ಸಂ.ಉಪಲೋಕ್–2/ಡಿಇ/195/2019/ಎಆರ್‌ಇ–19

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ಬೀದಿ,
ಬೆಂಗಳೂರು, ದಿ:30–12–2023.

**॥ವಿಚಾರಣಾ ವರದಿ ॥**

**ಉಪಸ್ಥಿತರು:– ಪ್ರಕಾಶ್ ನಾಡಿಗೇರ, ಅಪರ ನಿಬಂಧಕರು,**
ವಿಚಾರಣೆಗಳು–19, ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:–** ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವ ಕುರಿತು.

**ಉಲ್ಲೇಖ:–**
1. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.12(3)ರ ಅಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ ವರದಿ ಸಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್/1328/2017/ಪಿಪಿ, ದಿ:12–12–2018.
2. ಸರ್ಕಾರದ ಆದೇಶ ಸಂ: ಗ್ರಾಅಪ 99 ಗ್ರಾಪಂಕಾ 2019, ಬೆಂಗಳೂರು ದಿನಾಂಕ:04–07–2019.
3. ನಾಮನಿರ್ದೇಶನ ಸಂ.ಉಪಲೋಕ್–2/ಡಿಇ/195/2019, ಬೆಂಗಳೂರು ದಿನಾಂಕ:10–07–2019.

*****

ದೂರುದಾರರಾದ *ಶ್ರೀ ರಾಜೀವ್ ಹೆಗ್ಡೆ ಬಿನ್ ತೇಜಪ್ಪ ಹೆಗ್ಡೆ, ನೀರಜಡ್ಡು, ಕುಲ್ಲಂಜೆ ಗ್ರಾಮ, ಶಂಕರ ನಾರಯಣ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)* ಆಪಾದಿತ ಸರ್ಕಾರಿ ನೌಕರರಾದ *ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ* ಇವರು *(ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಎಂದು ಕರೆಯಲ್ಪಡುತ್ತಾರೆ)*

30/12/2023

ಇವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರಿನಲ್ಲಿ ಯಡ್ತರೆ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಸತ್ಯಮ್ಮ ಆಚಾರ್ತಿ ಇವರಿಗೆ ಸ್ಲಾಬ್ ಮನೆಯನ್ನು ಕಟ್ಟಿಕೊಳ್ಳಲು ಹಾಗೂ ಮೊದಲನೇ ಮಹಡಿ ಕಟ್ಟಡಲು ಪರವಾನಗಿಯನ್ನು ನೀಡಿದ್ದು ಮತ್ತು ಸದರಿ ಪರವಾನಿಗೆಗೆ ನೀವು ಸಹಿ ಮಾಡಿದ್ದು, ಸದರಿ ಮನೆಯನ್ನು ನಿಮಯ ಬಾಹಿರವಾಗಿ ಶ್ರೀ ಸತ್ಯಮ್ಮ ಆಚಾರ್ತಿ ಇವರು ಕಟ್ಟಡ ನಿರ್ಮಾಣ ಮಾಡುತ್ತಿದ್ದ ಹಂತದಲ್ಲಿಯೇ ಒತ್ತುವರಿ ಮಾಡಿದ ಬಗ್ಗೆ ಕ್ರಮ ಜರುಗಿಸುವ ಹೊಣೆಗಾರಿಕೆ ನಿಮ್ಮ ಮೇಲಿದ್ದು, ನೀವು ನಿಯಮಾನುಸಾರ ಯಾವುದೇ ಕ್ರಮ ಜರುಗಿಸದೇ ಕರ್ತವ್ಯಲೋಪವೆಸಗಿದ್ದರಿಂದ ಸದರಿ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿರುತ್ತದೆ.

2] ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.12(3) ಅಡಿಯಲ್ಲಿ ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಉಲ್ಲೇಖ(2)ರಲ್ಲಿ ಕಾಣಿಸಿದಂತೆ, ಸರ್ಕಾರದ ಆದೇಶ ಸಂ.ಗ್ರಾಅಪ 99 ಗ್ರಾಪಂಕಾ 2019, ಬೆಂಗಳೂರು, ದಿ:04-07-2019ರ ಆದೇಶದಂತೆ, ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತ ರವರು ಉಲ್ಲೇಖ(3)ರಂತೆ ದಿನಾಂಕ:10-07-2019ರಂದು ಅಪರ ನಿಬಂಧಕರು, ವಿಚಾರಣೆಗಳು-15 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ.

3] ಮೇಲೆ ಹೇಳಿದ ಉಲ್ಲೇಖ(3)ರಲ್ಲಿ ನಮೂದಿಸಿರುವ ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶದ ಮೇರೆಗೆ **ಆ.ಸ.ನೌ ರವರ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ದೋಷಾರೋಪಣೆಯನ್ನು ಆ.ಸ.ನೌ ರವರಿಗೆ ದಿ:15-10-2019 ರಂದು ಕಳುಹಿಸಲಾಗಿರುತ್ತದೆ.

4] ನಂತರ ಆಪಾದಿತ ಸರ್ಕಾರಿ ನೌಕರರಾದ [ಅಸನೌ] ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರಿಗೆ ನೋಟೀಸ್‌ನೊಂದಿಗೆ ಸದರಿ ದೋಷಾರೋಪಣೆ, ದಾಖಲೆಗಳು ಮತ್ತು ಸಾಕ್ಷಿದಾರರ ಹೆಸರುಗಳು ಒಳಗೊಂಡ ದಾಖಲೆಗಳ ನಕಲುಗಳನ್ನು ಅಸನೌ ರವರಿಗೆ ಜಾರಿಯಾಗಿರುತ್ತದೆ. ಸದರಿ ಅಧಿಕಾರಿಯವರು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ನಡೆಸಲು ಒಪ್ಪಿಕೊಂಡಿರುತ್ತಾರೆ.

5] ಆ ಪ್ರಕಾರ ಅಪರ ನಿಬಂಧಕರು, ವಿಚಾರಣೆಗಳು–15 ರವರು ಈ ಪ್ರಕರಣದಲ್ಲಿ ವಿಚಾರಣೆಯನ್ನು ಕೈಗೊಂಡು ವಿಚಾರಣೆ ಮುಕ್ತಾಯಗೊಳಿಸಿದ್ದು, ತಮ್ಮ ವರದಿಯನ್ನು ತಯಾರಿಸಿ ಸಲ್ಲಿಸಲು ಬಾಕಿ ಇತ್ತು. ಆ ಸಂದರ್ಭದಲ್ಲಿ ಅಪರ ನಿಬಂಧಕರು, ವಿಚಾರಣೆಗಳು–15 ಇವರಿಗೆ ಈ ಸಂಸ್ಥೆಯಿಂದ ಬೇರೆ ಸ್ಥಳಕ್ಕೆ ವರ್ಗಾವಣೆಯಾದ ಪ್ರಯುಕ್ತ ಮಾನ್ಯ ನಿಬಂಧಕರು, ಕಲೋ, ಬೆಂಗಳೂರು ರವರ ಕಛೇರಿ ಆದೇಶ ಸಂ.ನೋಟ್/ಉಪಲೋ–1 & 2/ಡಿಇ/ವರ್ಗಾವಣೆ/2023, ದಿ:06–10–2023 ರೀತ್ಯಾ ವಿಚಾರಣಾ ವರದಿಯನ್ನು ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು–19 ರವರಿಗೆ ವಹಿಸಲಾಗಿರುತ್ತದೆ.

6] **ದೂರಿನ ಸಂಕ್ಷಿಪ್ತ ಸಾರಾಂಶ:–** ಕುಂದಾಪುರ ತಾಲ್ಲೂಕು, ಕುಳ್ಳಂಜೆ ಗ್ರಾಮದ ಸರ್ವೆ ನಂ.148/2 ರಲ್ಲಿ 0.31 ಎಕರೆ ಸ್ಥಳವು ಫಿರ್ಯಾದುದಾರರ ಹೆಂಡತಿಯ ಹೆಸರಿನಲ್ಲಿದ್ದು, ಸದರಿ ಸ್ಥಳವು ಕುಳ್ಳಂಜೆ ಗ್ರಾಮದ ನೀರುಜಡ್ಡು ಜನತಾ ಕಾಲೋನಿಯಲ್ಲಿ ಇರುವುದಾಗಿದೆ. ಫಿರ್ಯಾದುದರರು ಮನೆಗೆ ಬರಲು ಈ ಕಾಲೋನಿ ಮುಖಾಂತರ 15 ಫೀಟ್ ಸಾರ್ವಜನಿಕ ರಸ್ತೆ ಇದ್ದು ರಸ್ತೆ ಇಕ್ಕಲ್ಲಗಳಲ್ಲಿ ವಾಸ್ತವ್ಯದ ಮನೆಗಳಿದ್ದು, ಸದರಿ ರಸ್ತೆ ಪಕ್ಕ ಶ್ರೀಮತಿ ಸತ್ಯಮ್ಮ ಆಚಾರ್ತಿ ಎನ್ನುವವರು ಸರ್ವೆ ನಂ.148/1ಪಿ3 ಜಮೀನಿನಲ್ಲಿ ಹೊಸದಾಗಿ ಮನೆ ನಿರ್ಮಾಣ ಮಾಡಿದ್ದು, ತಮ್ಮ ಮನೆಯ ತ್ಯಾಜ್ಯ ನೀರನ್ನು ಹರಿಯ ಬಿಡಲು ಸದರಿ ಸಾರ್ವಜನಿಕ ರಸ್ತೆಯನ್ನು ಚರಂಡಿಯಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಒತ್ತುವರಿ ಮಾಡಿಕೊಂಡ ಸ್ಥಳದಿಂದ ಫಿರ್ಯಾದುದಾರರ ಮನೆಗೆ ಯಾವುದೇ ವಾಹನ ಬರಲು ಕಷ್ಟಕವಾಗಿರುತ್ತದೆ. ಈ ಬಗ್ಗೆ ಗ್ರಾಮ ಪಂಚಾಯತಿಗೆ ಲಿಖಿತ ದೂರನ್ನು ನೀಡಿದ್ದು,

ಸದರಿಯವರು ನೋಟೀಸ್ ಜಾರಿ ಮಾಡಿ, ಚರಂಡಿಗೆ ಪರ್ಯಾಯ ವ್ಯವಸ್ಥೆ ಮಾಡಲು ತಿಳಿಸಿರುತ್ತಾರೆ. ನೋಡಲ್ ಅಧಿಕಾರಿಯವರು ಸ್ಥಳಕ್ಕೆ ಬಂದು, ಸ್ಥಳ ಪರಿಶೀಲನೆ ಮಾಡಿ ಶ್ರೀಮತಿ ಸತ್ಯಮ್ಮ ಆಚಾರ್ತಿಯವರು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿರುವುದಾಗಿ ವರದಿಯನ್ನು ಗ್ರಾಮ ಪಂಚಾಯತ್ ಶಂಕರನಾಯಣಗೆ ನೀಡಿರುತ್ತಾರೆ ಎಂಬುದಾಗಿರುತ್ತದೆ.

7] **ಆಸನೌ ಆದ ನೀವು,**

(1) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು, ಯಡ್ತರೆ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು ಕುಳ್ಳಂಜಿ ಗ್ರಾಮದ ಸರ್ವೆ ನಂ.148/1ಪಿ3 ಜಮೀನಿನಲ್ಲಿ ಶ್ರೀಮತಿ ಸತ್ಯಮ್ಮ ಆಚಾರ್ತಿ ರವರು ಮನೆ ನಿರ್ಮಿಸಿದ್ದು ನೀರು ಜಡ್ಡು ಜನತಾ ಕಾಲೋನಿಯಲ್ಲಿ ಇರುವ 15 ಫೀಟ್ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ ಮನೆಯ ತ್ಯಾಜ್ಯ ನೀರನ್ನು ರಸ್ತೆ ಮೇಲೆ ಹರಿದು ಬಿಟ್ಟಿರುವುದನ್ನು ತಡೆಹಿಡಿಯುವುದರ ಬಗ್ಗೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ.

(2) ಆಪಾದಿತ ಸರ್ಕಾರಿ ನೌಕರರಾದ ನೀವು- ಶ್ರೀಮತಿ ಸತ್ಯಮ್ಮ ಆಚಾರ್ತಿ ಇವರಿಗೆ 1994-95 ರಲ್ಲಿ 0.05 ಸೆಂಟ್ಸ್ ಮನೆ ನಿವೇಶನ ಮಂಜೂರಾಗಿದ್ದು, ಮನೆ ಕಟ್ಟಿಕೊಂಡಿರುತ್ತಾರೆ. ಸದರಿ ಮನೆಯನ್ನು ಪುನ: ರಚನೆ ಮಾಡುವ ಸಂದರ್ಭದಲ್ಲಿ ಪಂಚಾಯತ್ ರಸ್ತೆ ಚರಂಡಿಯನ್ನು ಒತ್ತುವರಿ ಮಾಡಿ ಚರಂಡಿಯನ್ನು ಮುಚ್ಚಿರುವುದನ್ನು ತೆರವುಗೊಳಿಸುವ ಬಗ್ಗೆ ಆಪಾದಿತ ಸರ್ಕಾರಿ ನೌಕರರಾದ ನೀವು- ಈ ಬಗ್ಗೆ ಪಂಚಾಯತಿಯಿಂದ ದಿನಾಂಕ: 30-08-2016 ರಂದು ಹಾಗೂ 03-10-2017 ರಂದು ಅವರಿಗೆ ನೋಟೀಸ್ ನೀಡಿದ್ದು, ಸತ್ಯಮ್ಮ ಆಚಾರ್ತಿ ಇವರು ಚರಂಡಿಯನ್ನು ಪುನ: ನಿರ್ಮಿಸಿಕೊಂಡುವ ಬಗ್ಗೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ.

(3) ಆಪಾದಿತ ಸರ್ಕಾರಿ ನೌಕರರದ ನೀವು- ಶಂಕರನಾರಾಯಣ ಗ್ರಾಮ ಪಂಚಾಯತಿಯಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ

ಶ್ರೀಮತಿ ಸತ್ಯಮ್ಮ ಆಚಾರ್ತಿ ಇವರಿಗೆ ಸ್ಲಾಬ್ ಮನೆಯನ್ನು ಕಟ್ಟಿಕೊಳ್ಳಲು ಹಾಗೂ ಮೊಲನೇ ಮಹಡಿ ಕಟ್ಟಡಲು ಪರವಾನಗಿಯನ್ನು ನೀಡಿದ್ದು ಮತ್ತು ಸದರಿ ಪರವಾನಗಿಗಳಿಗೆ ನೀವು ಸಹಿ ಮಾಡಿರುತ್ತೀರಿ. ಸದರಿ ಮನೆಯನ್ನು ನಿಯಮ ಬಾಹಿರವಾಗಿ ಶ್ರೀ ಸತ್ಯಮ್ಮ ಆಚಾರ್ತಿ ಇವರು ಕಟ್ಟಡ ನಿರ್ಮಾಣ ಮಾಡುತ್ತಿದ್ದ ಹಂತದಲ್ಲಿಯೇ ನೀವು ನಿಯಮಾನುಸಾರ ಯಾವುದೇ ಕ್ರಮ ಜರುಗಿಸದೇ ಕರ್ತವ್ಯ ಲೋಪವೆಸಗಿರುತ್ತೀರಿ.

(4) ಈ ರೀತಿಯಾಗಿ ಆಪಾದಿತ ಸರ್ಕಾರಿ ನೌಕರರಾದ ನೀವು, ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ ದುರ್ವರ್ತನೆಯಿಂದ ವರ್ತಿಸಿ, ಪರಿಪೂರ್ಣ ಪ್ರಾಮಾಣಿಕತೆ ತೋರಿಸದೇ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಿರೆಂದು ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿಬಂಧ ಮತ್ತು ಮೇಲ್ಮನವಿ) 1957ರ ಮೇರೆಗೆ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

8] ಸದರಿ ದೋಷಾರೋಪಣೆಯನ್ನು ಅಸನೌ ರವರ ವಿರುದ್ಧ ರುಜುವಾತುಪಡಿಸಲು ಸಕ್ಷಮ ಪ್ರಾಧಿಕಾರದ ಪರವಾಗಿ ಪಿಡ.ಬ್ಲ್ಯೂ–1 ಮತ್ತು 2 ರವರುಗಳ ವಿಚಾರಣೆ ಮಾಡಿದ್ದು, ನಿಶಾನೆ ಪಿ–01 ರಿಂದ ನಿಶಾನೆ ಪಿ–09 ರವರೆಗೆ ದಾಖಲೆಗಳನ್ನು ಹಾಜರಪಡಿಸಿರುತ್ತಾರೆ. ಅಸನೌ ರವರು ಸ್ವತ: ತಮ್ಮ ಸಾಕ್ಷಿಯನ್ನು ಡಿ.ಡಬ್ಲ್ಯೂ–1 ಎಂದು ನುಡಿದಿದ್ದು, ಒಂದು ದಾಖಲೆನ್ನು ನಿಶಾನೆ ಡಿ–1 ಎಂದು ಹಾಜರಪಡಿಸಿರುತ್ತಾರೆ.

9] ನಾನು ಸಕ್ಷಮ ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳಾದ ಶ್ರೀ ನಾಗಪ್ಪ ಇವರ ವಾದವನ್ನು ಮತ್ತು ಅಸನೌ ರವರ ಪರವಾಗಿ ರಕ್ಷಣಾ ಸಹಾಯಕರಾದ ಶ್ರೀ ಲೋಬೋ ಇವರ ವಾದಗಳನ್ನು ಆಲಿಸಿರುತ್ತೇನೆ. ಪ್ರಕರಣದಲ್ಲಿ ಹಾಜರಪಡಿಸಲಾದ ಮೌಖಿಕ ಹಾಗೂ ದಾಖಲೆಗಳ ಸಾಕ್ಷಿಯನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ.

10] ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:–** ಸಕ್ಷಮ ಪ್ರಾಧಿಕಾರದವರು ಅಸನೌ ರವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1) (i) ಮತ್ತು (iii) ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಿರುತ್ತಾರೆಯೇ?

**ಅಂಶ–2** :– ಆದೇಶವೇನು?

11] ಈ ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ–1 :– ನಕಾರಾತ್ಮಕ**

**ಅಂಶ–2:– ಅಂತಿಮ ಆದೇಶದಂತೆ.**

**॥ ಕಾರಣಗಳು ॥**

12] **ಅಂಶ–1:–** ಈ ಪ್ರಕರಣದಲ್ಲಿ ದೂರುದಾರರಾದ ಶ್ರೀ ರಾಜೀವ್ ಹೆಗಡೆ ಇವರು ನಿಶಾನೆ ಪಿ–3 ದೂರನ್ನು ಸಲ್ಲಿಸುವ ಸಂದರ್ಭದಲ್ಲಿ ಅಸನೌ ಶ್ರೀ ರುಕ್ಕನಗೌಡ ಇವರು ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಅನ್ನುವುದು ಮತ್ತು ಯಡ್ತರೆ ಗ್ರಾಮ ಪಂಚಾಯ್ತಿಯ ಕುಳ್ಳಂಜೆ ಗ್ರಾಮದ ಸರ್ವೆ ನಂ.148/1ಪಿ3 ರಲ್ಲಿ ಸತ್ಯಮ್ಮ ಆಚಾರ್ತಿ ಅನ್ನುವವರು ಮನೆ ಕಟ್ಟಿದ್ದು ಆ ಮನೆ ಜನತಾ ಕಾಲೋನಿಯಲ್ಲಿರುವ 15 ಗುಂಟೆ ಸಾರ್ವಜನಿಕ ರಸ್ತೆ ಪಕ್ಕದಲ್ಲಿ ನಿರ್ಮಾಣ ಮಾಡಲ್ಪಟ್ಟಿರುತ್ತದೆ ಎನ್ನುವುದು ನಿರ್ವಿವಾದದ ಸಂಗತಿಗಳು.

13] ದೂರಿನ ಪ್ರಕಾರ ಸತ್ಯಮ್ಮ ಆಚಾರ್ತಿ ತಾನು ಹೊಸದಾಗಿ ಮನೆ ನಿರ್ಮಾಣ ಮಾಡಿದ ಸಂದರ್ಭದಲ್ಲಿ ತನ್ನ ಮನೆಯ ತ್ಯಾಜ್ಯ ನೀರನ್ನು ಹರಿಯ ಬಿಡಲು ಸಾರ್ವಜನಿಕ ರಸ್ತೆಯನ್ನು ಚರಂಡಿಯಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಸದರಿ ಒತ್ತುವರಿಯ ಕುರಿತು ದೂರುದಾರರು ಗ್ರಾಮ ಪಂಚಾಯ್ತಿಗೆ ಲಿಖಿತ ದೂರನ್ನು ನೀಡಿದ್ದರೂ ಸಹಾ ಅಸನೌ ಗ್ರಾಮ ಪಂಚಾಯ್ತಿಯ ಅಭಿವೃದ್ಧಿ ಅಧಿಕಾರಿಯಾಗಿ ಕೇವಲ ಸತ್ಯಮ್ಮ ಆಚಾರ್ತಿ ರವರಿಗೆ ಒಂದು ನೋಟೀಸ್ ಜಾರಿ ಮಾಡುವುದನ್ನು ಬಿಟ್ಟರೆ ಒತ್ತುವರಿ ತೆರವಿಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ಕರ್ತವ್ಯ ಲೋಪವೆಸಗಿದ್ದಾರೆ ಎಂದು ಆಪಾದಿಸಿರುತ್ತಾರೆ.

14] ಈ ಆಪಾದನೆಯ ಹಿನ್ನೆಲೆಯಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಸತ್ಯಮ್ಮ ಆಚಾರ್ತಿ ಯಡ್ಡರೆ ಗ್ರಾಮದ ಸರ್ವೆ ನಂ.148/1ಪಿ3 ಮನೆ ನಿರ್ಮಾಣ ಮಾಡಿ ತನ್ನ ಮನೆಗೆ ತ್ಯಾಜ್ಯದ ನೀರನ್ನು ಹರಿಯ ಬಿಡಲು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆಯೇ? ಮತ್ತು ಒಂದು ವೇಳೆ ಒತ್ತುವರಿ ಮಾಡಿಕೊಂಡಿದ್ದರೆ ಆ ಒತ್ತುವರಿಯನ್ನು ತೆರವುಗೊಳಿಸುವ ಕುರಿತು ಪಂಚಾಯ್ತಿಯ ಅಭಿವೃದ್ಧಿ ಅಧಿಕಾರಿಯವರು ಯಾವುದೇ ಕ್ರಮ ಜರುಗಿಸದೇ ಕರ್ತವ್ಯಕ್ಕೆ ಚ್ಯುತಿ ಉಂಟು ಮಾಡಿರುತ್ತಾರೆಯೇ ಎನ್ನುವುದು.

15] ದೋಷಾರೋಪಣೆಯನ್ನು ರುಜುವಾತುಪಡಿಸಲು ಸಕ್ಷಮ ಪ್ರಾಧಿಕಾರದ ಪರವಾಗಿ ದೂರುದಾರರು ಹಾಗೂ ಅಂದಿನ ಕುಂದಾಪುರ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ ಚನ್ನಪ್ಪ ಮೊಯಿಲಿ ಇವರನ್ನು ಕ್ರಮವಾಗಿ ಪಿ.ಡಬ್ಲ್ಯೂ–1 ಮತ್ತು 2 ಎಂದು ವಿಚಾರಣೆ ಮಾಡಿದ್ದು, ನಿಶಾನೆ ಪಿ–1 ರಿಂದ 9ರ ವರೆಗೆ ದಾಖಲೆಗಳನ್ನು ಹಾಜರಪಡಿಸಿರುತ್ತಾರೆ. ಅದೇ ರೀತಿ ಅಸನೌ ರವರು ತನ್ನ ಪರವಾಗಿ ಸ್ವತ: ಡಿಡಬ್ಲ್ಯೂ–1 ಎಂದು ಸಾಕ್ಷಿ ನುಡಿದಿದ್ದು, ಸ್ಥಳ ಮಹಜರನ್ನು ನಿಶಾನೆ ಡಿ–1 ಎಂದು ಹಾಜರಪಡಿಸಿರುತ್ತಾರೆ.

16] ಕುಳ್ಳಂಜೆ ಗ್ರಾಮದ ಜನತಾ ಕಾಲೋನಿಯಲ್ಲಿ 15 ಅಡಿ ಅಗಲದ ರಸ್ತೆಯಿದ್ದು ಆ ರಸ್ತೆಯ ಇಕ್ಕಲಗಳಲ್ಲಿ ಮನೆಗಳ ನಿರ್ಮಾಣ ಮಾಡಿಕೊಳ್ಳಲಾಗಿದೆ. ದೂರುದಾರರ ಸಾಕ್ಷ್ಯ ಮತ್ತು

ಆರೋಪಗಳ ಪ್ರಕಾರ ಸತ್ಯಮ್ಮ ಆಚಾರ್ತಿ ರವರು ಸದರಿ 15 ಅಡಿ ರಸ್ತೆಯ ಪೈಕಿ 10 ಅಡಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ನಿಶಾನೆ ಪಿ–3 ದೂರಿನಲ್ಲಿ 15 ಅಡಿ ಸಾರ್ವಜನಿಕ ರಸ್ತೆಯನ್ನು ಸತ್ಯಮ್ಮ ಚರಂಡಿಯಾಗಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಆ ಕಾರಣದಿಂದ ಆ ದಾರಿಯಲ್ಲಿ ವಾಹನಗಳು ಓಡಾಡಲು ಅನಾನುಕೂಲವಾಗುತ್ತಿರುತ್ತದೆ ಎಂದು ಕೂಡಾ ಹೇಳಿರುತ್ತಾರೆ.

17] ಪಾಟೀ ಸವಾಲಿನಲ್ಲಿ ದೂರುದಾರರು ಒಳಚರಂಡಿ ಅಂದರೆ ಪ್ರತ್ಯೇಕವಾಗಿ ಪೈಪ್ ಹಾಕಿರಲಿಲ್ಲ ಆದರೆ ಮಣ್ಣಿನ ಚರಂಡಿಯಾಗಿತ್ತು. ಆ ಚರಂಡಿಯನ್ನು ಸತ್ಯಮ್ಮ ಒತ್ತುವರಿ ಮಾಡಿಕೊಂಡು ರಸ್ತೆಗೆ ಕೊಳಚೆ ನೀರನ್ನು ಬಿಟ್ಟಿದ್ದರು ಎಂದು ಹೇಳಿರುತ್ತಾರೆ. ಮತ್ತು ಸತ್ಯಮ್ಮ ತನ್ನ ಮನೆ ಕಟ್ಟುವಾಗ ಅವಶ್ಯವಿದ್ದ ಮಣ್ಣು, ಕಲ್ಲುಗಳು ಇತ್ಯಾದಿ ರಸ್ತೆಗೆ ಹಾಕಿರಲಿಲ್ಲ. ಅವುಗಳನ್ನು ಚರಂಡಿಗೆ ಹಾಕಿ ಮುಚ್ಚಿದ್ದಾರೆ ಎಂದು ನುಡಿದಿರುತ್ತಾರೆ. ಮತ್ತು ಕಾಮಗಾರಿ ಪೂರ್ಣಗೊಂಡು ಆ ಮನೆಯಲ್ಲಿ ಸತ್ಯಮ್ಮ ವಾಸವಾಗಿದ್ದಾರೆ ಎಂದು ಕೂಡಾ ಹೇಳಿರುತ್ತಾರೆ. ಈ ಹಿನ್ನೆಲೆಯಲ್ಲಿ ಪಿ.ಡಬ್ಲ್ಯೂ–2 ಚನ್ನಪ್ಪ ಮೊಯಿಲಿ ಅಂದಿನ ಕುಂದಾಪುರ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಇವರ ಸಾಕ್ಷ್ಯವನ್ನು ಪರಿಗಣಿಸುವುದು ಮುಖ್ಯವಾಗಿರುತ್ತದೆ. ಸದರಿ ಸಾಕ್ಷಿದಾರರು ಶ್ರೀ ರಾಜೀವ್ ಹೆಗಡೆ (ಪಿ.ಡಬ್ಲ್ಯೂ–1) ಇವರು ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗೆ ದೂರು ಕೊಟ್ಟ ಹಿನ್ನೆಲೆಯಲ್ಲಿ ಸ್ಥಳ ತನಿಖೆಗೆ ಹೋಗಿದ್ದೆ, ಆಗ ಸತ್ಯಮ್ಮ ಆಚಾರ್ತಿ ಮನೆಯಿಂದ ತ್ಯಾಜ್ಯ ನೀರನ್ನು ರಸ್ತೆಗೆ ಹರಿಬಿಟ್ಟಿರುವುದು ಕಂಡುಬಂತು, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಪಿ.ಡಿ.ಓ ಮತ್ತು ಅಧ್ಯಕ್ಷರಿಗೆ ತಿಳಿಸಿದ್ದೆ ಎಂದು ಹೇಳಿರುತ್ತಾರೆ. ಈ ಅಧಿಕಾರಿಗೆ ಲೋಕಾಯುಕ್ತ ಸಂಸ್ಥೆಯಿಂದ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು ಎನ್ನುವುದು ಸ್ಪಷ್ಟವಾಗಿರುತ್ತದೆ. ಆ ಪ್ರಕಾರ ಪಿ.ಡಬ್ಲ್ಯೂ–2 ತಮ್ಮ ವರದಿಯನ್ನು ಸಲ್ಲಿಸಿದ್ದು, ಆ ವರದಿ ನಿಶಾನೆ ಪಿ–9 ಎಂದು ಗುರ್ತಿಸಲ್ಪಟ್ಟಿದೆ.

18] ಪಿ.ಡಬ್ಲ್ಯೂ–1 ದೂರುದಾರರು ಹಾಗೂ ಪಿ.ಡಬ್ಲ್ಯೂ–2 ಕಾರ್ಯನಿರ್ವಾಹಕ ಅಧಿಕಾರಿ ಮತ್ತು ನಿಶಾನೆ ಪಿ–9 ವರದಿ ಈ ಎಲ್ಲ ಸಾಕ್ಷ್ಯಗಳನ್ನ ಪರಿಶೀಲಿಸಲಾಗಿ, ಎಲ್ಲಿಯೂ ಸಹಾ ಸತ್ಯಮ್ಮ ಆಚಾರ್ತಿ 15 ಅಡಿ ಸಾರ್ವಜನಿಕ ರಸ್ತೆಯ ಪೈಕಿ 10 ಅಡಿ ರಸ್ತೆಯನ್ನು ಅತಿಕ್ರಮಿಸಿಕೊಂಡಿರುತ್ತಾರೆ ಅನ್ನುವುದು ಸಾಬೀತಾಗಿರುವುದಿಲ್ಲ. ಆದರೆ ಸತ್ಯಮ್ಮ ಆಚಾರ್ತಿ ತನ್ನ ಮನೆಯ ತ್ಯಾಜ್ಯ ನೀರನ್ನು ರಸ್ತೆಗೆ ಹರಿಬಿಡುತ್ತಿದ್ದರು ಎನ್ನುವುದು ಕಂಡುಬರುತ್ತದೆ.

19] ಇದಕ್ಕೆ ಪೂರಕವಾಗಿ ಅಸನೌ (ಡಿಡಬ್ಲ್ಯೂ–1) ತನ್ನ ಸಾಕ್ಷಿಯಲ್ಲಿ ದೂರಿನ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಚರಂಡಿಯನ್ನು ಸ್ವಚ್ಛಗೊಳಿಸಲು ಹಾಗೂ ಚರಂಡಿಯಲ್ಲಿ ಮಣ್ಣು ತುಂಬಿದ್ದರಿಂದ ನೀರನ್ನು ರಸ್ತೆಗೆ ಬಿಡದಂತೆ ಸತ್ಯಮ್ಮ ಆಚಾರ್ತಿ ರವರಿಗೆ ರಸ್ತೆಯ ಮೇಲೆ ಹಾಕಿರುವ ಮನೆಯ ಕಟ್ಟಡ ಸಾಮಗ್ರಿಗಳನ್ನು ತೆರವುಗೊಳಿಸಲು ಹಾಗೂ ಮಣ್ಣು ತುಂಬಿರುವ ಚರಂಡಿಯ ಮಣ್ಣನ್ನು ತೆಗೆದಲು ನೋಟೀಸ್ ಜಾರಿ ಮಾಡಿ ಕ್ರಮ ವಹಿಸಿರುತ್ತೇನೆ ಎಂದು ಹೇಳಿರುತ್ತಾರೆ. ಆ ರೀತಿ ಅಸನೌ ಸತ್ಯಮ್ಮ ಆಚಾರ್ತಿ ರವರ ಯಜಮಾನರಾದ ಶ್ರೀ ಗೋವಿಂದ ಆಚಾರಿ ಇವರಿಗೆ ನಿಶಾನೆ ಪಿ–5 ರಂತೆ ನೋಟೀಸ್ ನೀಡಿರುವುದು ಕೂಡಾ ಸ್ಪಷ್ಟವಾಗಿರುತ್ತದೆ. ಸದರಿ ನೋಟೀಸ್‌ನಲ್ಲಿ ಮನೆ ಕಾಮಗಾರಿ ಮಾಡುವ ಸಲುವಾಗಿ ತಮ್ಮ ಮನೆಯ ಬದಿ ಚರಂಡಿಯನ್ನು ಮುಚ್ಚಿರುತ್ತೀರಿ. ಮತ್ತು ತಮ್ಮ ಮನೆಯ ತ್ಯಾಜ್ಯ ನೀರನ್ನು ರಸ್ತೆಯ ಮೇಲೆ ಹರಿಯ ಬಿಟ್ಟಿರುತ್ತೀರಿ ಕಾರಣ, ಒಂದು ವಾರ ಕಾಲಾವಕಾಶ ಕೊಡಲಾಗಿದ್ದು, ಚರಂಡಿಯನ್ನು ನಿರ್ಮಿಸಿಕೊಡಲು ಸೂಚಿಸಿದೆ, ಇಲ್ಲದೆ ಇದ್ದಲ್ಲಿ ಪಂಚಾಯ್ತಿಯಿಂದ ಚರಂಡಿಯನ್ನು ಮುಚ್ಚಿಹಾಕಿರುವ ಬಗ್ಗೆ ಮತ್ತು ತ್ಯಾಜ್ಯ ನೀರನ್ನು ರಸ್ತೆಯ ಮೇಲೆ ಬಿಡುತ್ತಿರುವ ಬಗ್ಗೆ ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈಗಾಗಲೇ ಹೇಳಿದಂತೆ ದೂರುದಾರರು ನೀಡಿರುವ ಸಾಕ್ಷಿಯಂತೆ ರಸ್ತೆಯ ಎರಡು ಬದಿಯಲ್ಲಿರುವ ಚರಂಡಿ ಮಣ್ಣಿನ ಚರಂಡಿಯಾಗಿತ್ತು. ಮತ್ತು ಸತ್ಯಮ್ಮ ಮನೆ ಕಟ್ಟುವಾಗ ಅವಶ್ಯವಿದ್ದ ಮಣ್ಣು ಕಲ್ಲುಗಳು ರಸ್ತೆಗೆ ಹಾಕಿರಲಿಲ್ಲ. ಅಸನೌ ರವರ ಸಾಕ್ಷಿಯ ಪ್ರಕಾರ ಮನೆ ಕಟ್ಟುವ ಸಲುವಾಗಿ ಬಳಸಿರುವ ಕಟ್ಟಡ ಸಾಮಗ್ರಿಗಳು ಬಿದ್ದು ಚರಂಡಿ ಮುಚ್ಚಿದ್ದು ಇರುತ್ತದೆ. ಕಾರಣ, ಚರಂಡಿಯ ನೀರು ರಸ್ತೆಗೆ ಬರುತ್ತಿತ್ತು ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ, ದೂರುದಾರರು ಆಪಾದಿಸಿರುವಂತೆ ಎಲ್ಲಿಯೂ

ಸಹಾ ಸತ್ಯಮ್ಮ ರಸ್ತೆಯನ್ನೆ ಅತಿಕ್ರಮಿಸಿ ಚರಂಡಿಯಾಗಿ ಬಳಸುತ್ತಿದ್ದಾರೆ ಎನ್ನುವುದು ರುಜುವಾತಾಗಿರುವುದಿಲ್ಲ.

20] ಇದಲ್ಲದೆ ಡಿ.ಡಬ್ಲ್ಯೂ-1 ಅಸನೌ ತನ್ನ ಸಾಕ್ಷಿಯಲ್ಲಿ ತಾನು ದಿ:20-10-2016ರಂದು ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಮೇಲಿರುವ ಕಟ್ಟಡ ಸಾಮಗ್ರಿಗಳನ್ನು ತೆರವುಗೊಳಿಸಿ ಚರಂಡಿಯ ಮಣ್ಣನ್ನು ತೆಗೆದು ತನ್ನ ಕರ್ತವ್ಯವನ್ನು ನಿರ್ವಹಿಸಿದ್ದು, ಈ ಬಗ್ಗೆ ಸ್ಥಳ ಮಹಜರ್ ಮಾಡಿದ್ದೇನೆ ಎನ್ನುವುದನ್ನು ನುಡಿದಿರುತ್ತಾರೆ. ಮತ್ತು ಆ ಮಹಜರನ್ನು ನಿಶಾನೆ ಡಿ-1 ಎಂದು ಗುರ್ತಿಸಲಾಗಿದ್ದು, ಸದರಿ ದಾಖಲೆಯ ಪ್ರಕಾರ ದಿ:20-10-2016ರಂದು ಅಸನೌ ಸ್ಥಳ ಪರಿಶೀಲನೆ ಮಾಡಿ ಚರಂಡಿ ಮುಚ್ಚಿರುವುದನ್ನು ತೆರವುಗೊಳಿಸುವ ಕುರಿತು ಕ್ರಮ ಜರುಗಿಸಿ ಚರಂಡಿಯ ಮಣ್ಣನ್ನು ತೆಗೆದು ಅತಿಕ್ರಮಣ ತೆರವುಗೊಳಿಸಲಾಗಿದೆ ಎನ್ನುವುದನ್ನು ಮಹಜರನಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಹೀಗಿರುವಾಗ ಅಸನೌ ಯಡ್ತರೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಮತ್ತು ನಿಷ್ಠೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1) (i) ಮತ್ತು (iii)ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸುವಲ್ಲಿ ಸಕ್ಷಮ ಪ್ರಾಧಿಕಾರ ವಿಫಲರಾಗಿರುತ್ತದೆ ಎಂದು ಹೇಳದೆ ಅನ್ಯ ಮಾರ್ಗವಿರುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪವನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ **ವಿಫಲವಾಗಿರುತ್ತದೆ** ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

21] **ಅಂಶ-2:- ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

**॥ ನಿರ್ಣಯ ॥**

ಶಿಸ್ತು ಪ್ರಾಧಿಕಾರವು ಅಸನೌ ಶ್ರೀ ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ

ಜಿಲ್ಲೆ ಇವರು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಮತ್ತು ನಿಷ್ಠೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1)(i) ಮತ್ತು (iii) ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಲು ಸಕ್ಷಮ ಪ್ರಾಧಿಕಾರವು ವಿಫಲವಾಗಿರುತ್ತದೆ.

ಗೌರವಾನ್ವಿತ ಉಪಲೋಕಾಯುಕ್ತ ರವರ ಅನುಮೋದನೆಗಾಗಿ ಹಾಗೂ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

30.12.2023

[ಪ್ರಕಾಶ್ ನಾಡಿಗೇರ]
ಅಪರ ನಿಬಂಧಕರು, ವಿಚಾರಣೆಗಳು–19
ಬೆಂಗಳೂರು

**॥ಅನುಬಂಧ॥**

1] ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿದಾರರುಗಳ ಪಟ್ಟಿ

| | |
|---|---|
| ಪಿ.ಡಬ್ಲ್ಯೂ–1 | ಶ್ರೀ ರಾಜೀವ್ ತಂದೆ ತೇಜಪ್ಪ ಹೆಗ್ಗಡೆ (ದೂರುದಾರ) |
| ಪಿ.ಡಬ್ಲ್ಯೂ–2 | ಶ್ರೀ ಚನ್ನಪ್ಪ ಲೇಟ್ ಬಾಬಿ ಮೋಯಿಲಿ, ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ. |

2] ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ

| | |
|---|---|
| ನಿಶಾನೆ ಪಿ–1<br>ನಿಶಾನೆಪಿ1(ಎ) | ಪ್ರಪತ್ರ–1 (ಮೂಲ)<br>ದೂರುದಾರರ ಸಹಿ |

| | |
|---|---|
| ನಿಶಾನೆ ಪಿ 2<br>ನಿಶಾನೆ ಪಿ–2(ಎ) | ಪ್ರಪತ್ರ–2 (ಮೂಲ)<br>ದೂರುದಾರರ ಸಹಿ |
| ನಿಶಾನೆ ಪಿ–3<br>ನಿಶಾನೆ ಪಿ–3(ಎ) | ದೂರುದಾರರ ದೂರು ಅರ್ಜಿ (ಮೂಲ)<br>ದೂರುದಾರರ ಸಹಿ |
| ನಿಶಾನೆ ಪಿ–4<br><br>ನಿಶಾನೆ ಪಿ4(ಎ) | ದಿ:17–08–2016ರಂದು ಪಂಚಾಯ್ತಿಗೆ ರಸ್ತೆ ಒತ್ತುವರಿ ಮಾಡಿರುವ ಬಗ್ಗೆ ಕೊಟ್ಟ ದೂರಿನ ನಕಲು<br>ದೂರುದಾರರ ಸಹಿ |
| ನಿಶಾನೆ ಪಿ–5 | ದಿ:30–09–2016ರಂದು ಗ್ರಾಮ ಪಂಚಾಯತಿ ಪಿ.ಡಿ.ಓ ರವರು ಗೋವಿಂದಾಚಾರಿಗೆ ನೀಡಿರುವ ನೋಟೀಸಿನ ನಕಲು. |
| ನಿಶಾನೆ ಪಿ–6 | ದೂರುದಾರರಿಗೆ ಸೇರಿದ ಸ.ನಂ.148/2 ಜಮೀನಿನ ಜಾಗ ಸರ್ವೆಯಾಗಿದ್ದು ಅದರ ಆರ್.ಟಿ.ಸಿ ನಕಲು |
| ನಿಶಾನೆ ಪಿ–7 | ಸತ್ಯಮ್ಮ ಅಚಾರ್ತಿ ಇವರಿಗೆ ಸೇರಿದ ಜಾಗದ ಆರ್.ಟಿ.ಸಿ ನಕಲು |
| ನಿಶಾನೆ ಪಿ–8 | ಕುಂದಾಪುರ ತಾಲ್ಲೂಕು ಪಂಚಾಯತಿ, ಕಾರ್ಯನಿರ್ವಾಹಕ ಅಧಿಕಾರಿಯವರು ನೋಡಲ್ ಆಫೀಸರ್ ನೇಮಕಾತಿ ಹಾಗೂ ಕ್ರಮ ತೆಗೆದುಕೊಳ್ಳಲು ದಿ:19–09–2016ರಂದು ಹೊರಡಿಸಿದ ಆದೇಶದ ಪ್ರತ. |

1. ಅಸನೌ ರವರು ತಮ್ಮ ಪರವಾಗಿ ಹಾಜರಪಡಿಸಿದ ದಾಖಲೆಗಳ ಪಟ್ಟಿ

| | |
|---|---|
| ಡಿ.ಡಬ್ಲ್ಯೂ–1 | ರುಕ್ಕನಗೌಡ ತಂದೆ ಷಡಕ್ಷರಿ ಗೌಡ, ಪಿ.ಡಿ.ಓ ಯಡ್ತರೆ ಗ್ರಾಮ ಪಂಚಾಯ್ತಿ. |

1] ಅಸನೌ ರವರ ಪರ ಸಾಕ್ಷಿದಾರರುಗಳ ಪಟ್ಟಿ

| | |
|---|---|
| ನಿಶಾನೆ ಡಿ.1 | ಶ್ರೀ ಶಂಕರನಾರಾಯಣ, ಪಿ.ಡಿ.ಓ ಇವರು ಮಾಡಿದ ಸ್ಥಳದ ಮಹಜರ್ |

30/12/2023

[ಪ್ರಕಾಶ್ ನಾಡಿಗೇರ]
ಅಪರ ನಿಬಂಧಕರು, ವಿಚಾರಣೆಗಳು–19
ಬೆಂಗಳೂರು

## ಕರ್ನಾಟಕ ಸರ್ಕಾರ

## ಕರ್ನಾಟಕ ಲೋಕಾಯುಕ್ತ

ನಂ: ಉಪಲೋಕ್-2/ಡಿಇ/195/2019/ಎ.ಆರ್.ಇ-19

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 29ನೇ ಡಿಸೆಂಬರ್ 2023.

### -:: ಶಿಫಾರಸ್ಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ. ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/99/ಗ್ರಾಪಂಕಾ/2019, ಬೆಂಗಳೂರು, ದಿನಾಂಕ: 04/07/2019.

(2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮ ನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್-2/ಡಿಇ/195/2019, ಬೆಂಗಳೂರು, ದಿನಾಂಕ: 10/07/2019.

(3) ಅಪರ ನಿಬಂಧಕರು ವಿಚಾರಣೆಗಳು-19, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 30/12/2023.

*****

ಸರ್ಕಾರದ ಆದೇಶ ದಿನಾಂಕ: 04/07/2019ರಂತೆ ಶ್ರೀ. ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು

ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ ಉಪಲೋಕ್-2/ಡಿಇ/195/2019, ಬೆಂಗಳೂರು, ದಿನಾಂಕ: 10/07/2019ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-15 ರವರಿಗೆ ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ. ತದನಂತರ, ತದನಂತರ, ಆದೇಶ ಸಂಖ್ಯೆ:ಉಪಲೋಕ್-1 & 2/ಡಿಇ/ವರ್ಗಾವಣೆ/2023, ದಿನಾಂಕ: 06/10/2023ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-19, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಆ.ಸ.ನೌಕರರ ವಿರುದ್ಧ ನಡೆದಿದೆ ಎನ್ನಲಾದ ದುರ್ನಡತೆ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ಮರುನಾಮಕರಣಗೊಳಿಸಿದೆ.

3. ಆ.ಸ.ನೌಕರರಾದ ಶ್ರೀ. ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

**<u>ಅನುಬಂಧ-1</u>**

**<u>ದೋಷಾರೋಪಣೆ</u>**

ಆಸನೌ ಆದ ನೀವು,

(1) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು, ಯಡ್ತರೆ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು ಕುಳ್ಳಂಜಿ ಗ್ರಾಮದ ಸರ್ವೆ ನಂ.148/1ಪಿ3 ಜಮೀನಿನಲ್ಲಿ ಶ್ರೀಮತಿ ಸತ್ಯಮ್ಮ ಆಚಾರ್ತಿ ರವರು ಮನೆ ನಿರ್ಮಿಸಿದ್ದು ನೀರು ಜಡ್ಡು ಜನತಾ ಕಾಲೋನಿಯಲ್ಲಿ ಇರುವ 15 ಫೀಟ್ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ ಮನೆಯ ತ್ಯಾಜ್ಯ ನೀರನ್ನು ರಸ್ತೆ ಮೇಲೆ ಹರಿದು ಬಿಟ್ಟಿರುವುದನ್ನು ತಡೆಹಿಡಿಯುವುದರ ಬಗ್ಗೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ.

(2) ಆಪಾದಿತ ಸರ್ಕಾರಿ ನೌಕರರಾದ ನೀವು- ಶ್ರೀಮತಿ ಸತ್ಯಮ್ಮ ಆಚಾರ್ತಿ ಇವರಿಗೆ 1994-95 ರಲ್ಲಿ 0.05 ಸೆಂಟ್ಸ್ ಮನೆ ನಿವೇಶನ ಮಂಜೂರಾಗಿದ್ದು, ಮನೆ ಕಟ್ಟಿಕೊಂಡಿರುತ್ತಾರೆ. ಸದರಿ ಮನೆಯನ್ನು ಪುನ: ರಚನೆ ಮಾಡುವ ಸಂದರ್ಭದಲ್ಲಿ ಪಂಚಾಯತ್ ರಸ್ತೆ ಚರಂಡಿಯನ್ನು ಒತ್ತುವರಿ ಮಾಡಿ ಚರಂಡಿಯನ್ನು ಮುಚ್ಚಿರುವುದನ್ನು ತೆರವುಗೊಳಿಸುವ ಬಗ್ಗೆ ಆಪಾದಿತ ಸರ್ಕಾರಿ ನೌಕರರಾದ ನೀವು- ಈ ಬಗ್ಗೆ ಪಂಚಾಯತಿಯಿಂದ ದಿನಾಂಕ:

30-08-2016 ರಂದು ಹಾಗೂ 03-10-2017 ರಂದು ಅವರಿಗೆ ನೋಟೀಸ್ ನೀಡಿದ್ದು, ಸತ್ಯಮ್ಮ ಆಚಾರ್ತಿ ಇವರು ಚರಂಡಿಯನ್ನು ಪುನ: ನಿರ್ಮಿಸಿಕೊಂಡುವ ಬಗ್ಗೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ.

(3) ಆಪಾದಿತ ಸರ್ಕಾರಿ ನೌಕರರದ ನೀವು- ಶಂಕರನಾರಾಯಣ ಗ್ರಾಮ ಪಂಚಾಯತಿಯಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಸತ್ಯಮ್ಮ ಆಚಾರ್ತಿ ಇವರಿಗೆ ಸ್ಲಾಬ್ ಮನೆಯನ್ನು ಕಟ್ಟಿಕೊಳ್ಳಲು ಹಾಗೂ ಮೊಲನೇ ಮಹಡಿ ಕಟ್ಟಡಲು ಪರವಾನಗಿಯನ್ನು ನೀಡಿದ್ದು ಮತ್ತು ಸದರಿ ಪರವಾನಗಿಗಳಿಗೆ ನೀವು ಸಹಿ ಮಾಡಿರುತ್ತೀರಿ. ಸದರಿ ಮನೆಯನ್ನು ನಿಯಮ ಬಾಹಿರವಾಗಿ ಶ್ರೀ ಸತ್ಯಮ್ಮ ಆಚಾರ್ತಿ ಇವರು ಕಟ್ಟಡ ನಿರ್ಮಾಣ ಮಾಡುತ್ತಿದ್ದ ಹಂತದಲ್ಲಿಯೇ ನೀವು ನಿಯಮಾನುಸಾರ ಯಾವುದೇ ಕ್ರಮ ಜರುಗಿಸದೇ ಕರ್ತವ್ಯ ಲೋಪವೆಸಗಿರುತ್ತೀರಿ.

(4) ಈ ರೀತಿಯಾಗಿ ಆಪಾದಿತ ಸರ್ಕಾರಿ ನೌಕರರಾದ ನೀವು, ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ ದುರ್ವರ್ತನೆಯಿಂದ ವರ್ತಿಸಿ, ಪರಿಪೂರ್ಣ ಪ್ರಾಮಾಣಿಕತೆ ತೋರಿಸದೇ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಿರೆಂದು ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿಬಂಧ ಮತ್ತು ಮೇಲ್ಮನವಿ) 1957ರ ಮೇರೆಗೆ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು-19), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ. ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಇಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ-1 ರಿಂದ ಪಿ.ಡಬ್ಲ್ಯೂ-2 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ-1 ರಿಂದ ನಿಶಾನೆ ಪಿ-8 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರು ಸ್ವತ: ತಾವೇ ಡಿ.ಡಬ್ಲ್ಯೂ-1 ಸಾಕ್ಷಿಯಾಗಿ ವಿಚಾರಣೆಗೆ ಒಳಗೊಂಡು ನಿಶಾನೆ ಡಿ-1 ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು

ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ ಶ್ರೀ. ರುಕ್ಕನಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಯಡ್ತರೆ ಗ್ರಾಮ ಪಂಚಾಯಿತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ **'ದೋಷಮುಕ್ತಗೊಳಿಸಲು'** ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/12/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.